**ದಿನಾಂಕಃ 13-10-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಆರ್ ವಿ ಆರ್ ವಕೀಲರಿಂದಃ**

1. ನಾನು ಈ ದಿನ ಮುಖ್ಯ ವಿಚಾರಣೆಗಾಗಿ ನನ್ನ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ. ಸದರಿ ಪ್ರಮಾಣ ಪತ್ರವನ್ನು ತಯಾರಿಸಲು ನಾನೇ ಮಾಹಿತಿ ನೀಡಿದ್ದೇನೆ. ಸದರಿ ಪ್ರಮಾಣ ಪತ್ರದಲ್ಲಿ ಹೇಳಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ.

2. ಈ ಕೆಳಕಂಡ ದಾಖಲಾತಿಗಳನ್ನು ನಾನು ಹಾಜರು ಪಡಿಸುತ್ತಿದ್ದೇನೆ . ಅವುಗಳನ್ನು ನಿಶಾನೆ ಮಾಡಬೇಕಾಗಿ ಕೋರುತ್ತೇನೆ .

ನಿ.ಪಿ. 1 ನಾನು ಎದುರುದಾರ ಕಂಪನಿಗೆ ವಕೀಲರ ಮೂಲಕ ಕಳುಹಿಸಿರುವ ತಿಳುವಳಿಕೆ ಪತ್ರ ಆಗಿದೆ .

ನಿ.ಪಿ. 1(ಎ) ನೋಂದಾಯಿಸಿದ ಅಂಚೆಯಲ್ಲಿ ತಿಳುವಳಿಕೆ ಪತ್ರವನ್ನು ಕಳುಹಿಸಿದ ಬಗ್ಗೆ ಅಂಚೆ ರಸೀದಿಯಾಗಿದೆ .

ನಿ.ಪಿ. 1(ಬಿ) ಸದರಿ ತಿಳುವಳಿಕೆ ಪತ್ರ ಜಾರಿಯಾಗಿರುವ ಬಗ್ಗೆ ಅಂಚೆ ಸ್ವೀಕೃತಿಯಾಗಿದೆ .

ನಿ.ಪಿ. 1(ಸಿ) ಇಂಡಿಯಾ ಪೋಸ್ಟ್ ನೆಟ್ ಟ್ರ್ಯಾಕಿಂಗ್ ಮುದ್ರಿತ ಪ್ರತಿಯಾಗಿದೆ .

ನಿ.ಪಿ. 2 ಕಾರವಾರ ಕಾರ್ಮಿಕ ಅಧಿಕಾರಿಯವರು ಈ ಪ್ರಕರಣಕ್ಕೆ ಸಂಬಂಧಿಸಿದ ಐಡಿಎ / ಎಸ್ ಆರ್ 18/2016-17 ರಲ್ಲಿ ಸಲ್ಲಿಸಿರುವ ಮೂಲ ಕಡತ ಆಗಿದೆ . ಅದರ ಜೊತೆ ಪರಿವಿಡಿ ಸಹ ಇದೆ .

**ಪಾಟೀ ಸವಾಲುಃ ಎದುರುದಾರರ ಪರ ಶ್ರೀಮತಿ ಎ ಪಿ ಬಿ ವಕೀಲರು ಸಮಯ ಕೋರಿದ್ದಾರೆ** . **ಆದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ.